**<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>**

ಸಿ.ಸಿ.ನಂ. 3053/2023

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರುಃ- ರಾಜೇಶ್

ತಂದೆಯ ಹೆಸರು ಪುಟ್ಟರಾಮಯ್ಯ

ವಯಸ್ಸು 27 ವರ್ಷ

ಉದ್ಯೋಗ ಚಾಲಕ

ವಾಸ ಉಜ್ಜನಿ

**<u>ಸಾಕ್ಷಿಗೆ ದಿಃ 16.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ದಿಃ 25.12.2022 ರಂದು ಮದ್ಯಾಹ್ನ 2 ಗಂಟೆಯ ಸಮಯದಲ್ಲಿ ಆರೋಪಿತರು ನನ್ನ ತಾಯಿಗೆ ಹೊಡೆದಿರುತ್ತಾರೆ. ಉಜ್ಜನಿ ಗ್ರಾಮದಲ್ಲಿ ನನ್ನ ತಾಯಿ ಹೆಸರಿಗೆ 20 X 30 ವಿಸ್ತೀರ್ಣದ ಸೈಟ್ ಇದ್ದು ಅದರಲ್ಲಿ ಅವರು ಕೆಲಸ ಮಾಡುತ್ತಿದ್ದಾಗ ಏಕಾಏಕಿ ಆರೋಪಿತರು ಬಂದು ನನ್ನ ತಾಯಿಗೆ ಆರೋಪಿಗೆ 2 ಮಚ್ಚಿನ ಹಿಡಿಯಿಂದ ಬೆನ್ನು, ತೋಳು ಮೈಕೈ ಮೇಲೆ ಹೊಡೆದಿರುತ್ತಾರೆ. ನನ್ನ ತಾಯಿಗೆ ಬೋಳಿ ಮುಂಡೆ, ಸೊಳೆ ಮೂಂಡೆ ಎಂದು ಅವ್ಯಾಚ್ಚ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿ 1, 3 ಮತ್ತು 4 ಅವರು ಸಹ ನನ್ನ ತಾಯಿಯನ್ನು ಕೈಯಿಂದ ಮತ್ತು ಕಾಲಿನಿಂದ ತುಳಿದು ಹೊಡೆದಿರುತ್ತಾರೆ. ಚಾಸಾ 3 ಅವರು ನನಗೆ ವಿಚಾರ ತಿಳಿಸಿದ್ದು ನನ್ನ ತಾಯಿಗೆ ಚಿಕಿತ್ಸೆಗೆ ಕರೆದುಕೊಂಡು ಹೋಗುವಂತೆ ಹೇಳಿರುತ್ತಾರೆ. ನನ್ನ ತಾಯಿಗೆ ಗಲಾಟೆ ಸಮಯದಲ್ಲಿ ಪ್ರಾಣ ಬೆದರಿಕೆಯೂ ಸಹ ಹಾಕಿರುತ್ತಾರೆ. ನಾನು ನನ್ನ ತಾಯಿಯನ್ನು ಹು.ದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅವರು ಇಲ್ಲಿ ಆಗುವುದಿಲ್ಲ ಕುಣಿಗಲ್ ಆಸ್ಪತ್ರೆಗೆ ಬರೆದು ಕೊಡುತ್ತೇನೆ ಕರೆದುಕೊಂಡು ಹೋಗು ಎಂದು ಹೇಳಿರುತ್ತಾರೆ. ಕುಣಿಗಲ್ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿರುತ್ತೇನೆ.

ದಿಃ 26.12.2022 ರಂದು 2 ಗಂಟೆಯ ಸಮಯದಲ್ಲಿ ಪಿಲ್ಲರ್ ಕಂಬಗಳನ್ನು ತಂದು ನಿಲ್ಲಿಸಿರುತ್ತಾರೆ ಮತ್ತು ಪ್ರಾಣ ಬೆದರಿಕೆಯೂ ಸಹ ಹಾಕಿರುತ್ತಾರೆ. ನಾನು ದಿಃ 27.12.2022 ರಂದು ಪೊ. ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ ಸದರಿ ದೂರಿಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 1 ಎಂದು ಸಹಿ ನಿ.ಪಿ 1(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 24.12.2022 ರಂದು ನನ್ನ ತಾಯಿಯ ಹೆಸರಿನಲ್ಲಿರುವ ಖಾತಾ ನಂ 405/509 ಸೈಟ್ ಗೆ ಸಂಬಂಧಿಸಿದಂತೆ ಜಗಳವಾಗಿರುತ್ತದೆ ಎಂದರೆ ಸರಿ. ದಿಃ 26.12.2022 ರಂದು ಬೆಳಿಗ್ಗೆ 10 ಗಂಟೆಗೆ ಆರೋಪಿತರು ಅತಿ ಕ್ರಮ ಪ್ರವೇಶ ಮಾಡಿ ಕಂಬಗಳನ್ನು ನೆಟ್ಟಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.